**ಸಾಕ್ಷಿಯನ್ನು ದಿನಾಂಕ 01-04-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎನ್.ಆರ್ ವಕೀಲರಿಂದಃ**

9. ಈ ಹಿಂದೆ ನಡೆದಿರುವ ದಾವೆಗಳಲ್ಲಿ ನಿಮ್ಮ ತಂದೆ ನವೀಲಪ್ಪ ರವರನ್ನು ನಂಜಪ್ಪ ದತ್ತು ತೆಗೆದುಕೊಂಡಿದದರು ಎಂಬ ವಿಷಯವನ್ನು ಹೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈ ದಾವೆಯ ಪ್ರತಿವಾದ ಪತ್ರದಲ್ಲಿ ಸದರಿ ವಿಷಯವನ್ನು ಬರೆಸಿಲ್ಲ. ದತ್ತು ಪಡೆದಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ಸದರಿ ದತ್ತಕ ಯಾವ ಇಸವಿಯಲ್ಲಿ ಹೇಗೆ ಆಗಿತ್ತು ಎಂಬ ಬಗ್ಗೆ ತೋರಿಸುವ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ವಿಲ್ ನಲ್ಲಿ ದತ್ತು ಪಡೆಯಲಾಗಿದೆ ಎಂದು ಬರೆದಿರುವುದನ್ನು ಹೊರತುಪಡಿಸಿ ಬೇರೆಲ್ಲೂ ಆ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿ. ನಾನು ನನ್ನ ತಂದೆ ವಿರುದ್ಧ ದಾಖಲಿಸಿದ್ದ ದಾವೆಯಲೂ ದತ್ತು ವಿಚಾರವನ್ನು ನನ್ನ ತಂದೆ ಹೇಳಿಲ್ಲ. ಬಸವರಾಪ್ಪ ರವರು ನನ್ನ ತಂದೆ ವಿರುದ್ಧ ಸಲ್ಲಿಸಿದ್ದ ದಾವೆಯಲೂ ಸಹ ಸದರಿ ವಿಷಯವನ್ನು ಉಲ್ಲೇಖಿಸಿಲ್ಲ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಹಾಗೂ ಬಸವರಾಜಪ್ಪ ದಾಖಲಿಸಿದ್ದ ದಾವೆಯಲ್ಲಿ ನಾವು ಪಕ್ಷಗಾರರಾಗಿ ಸೇರಿಕೊಂಡ ನಂತರವೂ ಸದರಿ ವಿಷಯವನ್ನು ಹೇಳಿಲ್ಲ ಎಂದರೆ ಸರಿ.

10. ನಿಡಿ-2 ರ ದಾಖಲೆಯಲ್ಲಿ ಉಲ್ಲೇಖಿಸಲಾಗಿರುವ ಒಪ್ಪಂದ ಪತ್ರದ ಬಗ್ಗೆ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಪುನಃ ಬೇರೆ ಯಾವುದೇ

ದಾಖಲೆಗಳು ಇಲ್ಲ ಎನ್ನುತ್ತಾರೆ. ದಿನಾಂಕ 15.06.1966 ರಲ್ಲಿ ನಿಡಿ-2 ರ ದಾಖಲೆ ಆಗುವ ಮೊದಲು ನಿಮ್ಮ ಒಟ್ಟು ಕುಟುಂಬದಲ್ಲಿ ಬೇರೆ ಯಾವುದಾದರೂ ದಾಖಲೆ ಆಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಜುಬಾನಿ ಪಾಲು ವಿಭಾಗ ಆಗಿದೆ ಎನ್ನುತ್ತಾರೆ. ಜುಬಾನಿ ಪಾಲು ವಿಭಾಗ ಪತ್ರದ ಬಗ್ಗೆ ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ. ಸದರಿ ಪಾಲು ವಿಭಾಗ ದಿನಾಂಕ 20.07.1950 ರಲ್ಲಿ ಮೇಲಪ್ಪ ಮತ್ತು ನನ್ನ ತಂದೆ ನವಿಲಪ್ಪ ನಡುವೆ ಆಗಿತ್ತು. ಆಗ ನನ್ನ ಅಜ್ಜ ನಂಜಪ್ಪ ಬದುಕಿರಲಿಲ್ಲ. ನಂಜಪ್ಪ ಯಾವಾಗ ತೀರಿಕೊಂಡರು ಎನ್ನುವುದು ನನಗೆ ಗೊತ್ತಿಲ್ಲ. ಈ ಹಿಂದೆ ನಡೆದ ದಾವೆಗಳಲ್ಲಿ ಜುಬಾನಿ ಹಿಸ್ಸೆ ಸಂಬಂಧ ದಾಖಲೆಗಳನ್ನು ಹಾಕಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

11. ನಮ್ಮ ಕುಟುಂಬದಲ್ಲಿ ಯಾವುದೇ ಜುಬಾನಿ ಪಾಲು-ಪಾರಿಕತ್ತು ಆಗಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನಿಡಿ-2 ರ ದಾಖಲೆಯಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿ. ಸದರಿ ಪಾಲು ವಿಭಾಗದಲ್ಲಿ ಸಾವಿತ್ರಮ್ಮನಿಗೆ ಯಾವುದೇ ಆಸ್ತಿ ಬಂದಿಲ್ಲ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಯ ಖಾತೆ ಬದಲಾವಣೆಗೆ ಒಪ್ಪಿಗೆ ಪತ್ರ ಕೊಡಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. 1966 ರಲ್ಲಿ ಸಾವಿತ್ರಮ್ಮ ರವರ ಹೆಸರಿಗೆ ದಾವಾ ಸ್ವತ್ತಿನ ದಾಖಲೆ ಇತ್ತು ಎಂದು ತೋರಿಸುವ ಯಾವುದೇ ದಾಖಲೆ ಇರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ.

12. ನನ್ನ ಅಜ್ಜ ಮೇಲಪ್ಪ ಯಾವಾಗ ತೀರಿಕೊಂಡರು ಎನ್ನುವುದು ನನಗೆ ಗೊತ್ತಿಲ್ಲ.

1966 ಕ್ಕೂ ಮೊದಲು ನಿಡಿ-2 ರ ದಾಖಲೆಯಲ್ಲಿ ಉಲ್ಲೇಖಿಸಿರುವ ಸ್ವತ್ತುಗಳು ಸಾವಿತ್ರಮ್ಮ ಅಥವಾ ಮೇಲಪ್ಪನ ಹೆಸರಿಗೆ ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಆ ರೀತಿ ದಾಖಲೆ ಇದೆಯೋ ಇಲ್ಲವೋ ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ ಎಂದರೆ ಸರಿ.

13. ನಿಡಿ-4 ರ ದಾಖಲೆಯೂ ಎ.ಡಿ.ಎಲ್.ಆರ್ ರವರು ನಡೆಸಿದ ದುರಸ್ತು ಕಾರ್ಯದ ಆಧಾರದ ಮೇಲೆ ಆಗಿದೆ ಎಂದರೆ ಸರಿ. ಸದರಿ ದಾಖಲೆ ಪ್ರಕಾರ 04-11-1988 ರಲ್ಲಿ ಸರ್ವೆ ನಂಬರ್ 40/1 ಮತ್ತು 40/2 ರ ಆಸ್ತಿಗಳು ದುರಸ್ತಾಗಿ ಸಾವಿತ್ರಮ್ಮ ಕೋಂ ಮೇಲಪ್ಪ ಮತ್ತು ನವಿಲಪ್ಪ ಬಿನ್ ತಿಮ್ಮಪ್ಪ ರವರ ಹೆಸರು ನಮೂದಾಗಿತ್ತು ಎಂದರೆ ಸರಿ. ಸರ್ವೆ ನಂಬರ್ 52/1 ಮತ್ತು 52/2 ರ ಆಸ್ತಿಗಳು ಸಹ ನವಿಲಪ್ಪ ಹಾಗೂ ಸಾವಿತ್ರಮ್ಮ ರವರ ಹೆಸರಿನಲ್ಲಿ ದುರಸ್ತು ಆಗಿತ್ತು ಎಂದರೆ ಸರಿ.

14. ಅಸಲು ದಾವೆ ಸಂಖ್ಯೆ 164/1980 ನ್ನು ವಾದಿ ನವಿಲಪ್ಪ ಬಿನ್ ತಿಮ್ಮಪ್ಪ ರವರ ವಿರುದ್ಧ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ಸರ್ವೆ ನಂಬರ್ 182 ರ ಆಸ್ತಿಯ ಸಂಬಂಧ ದಾಖಲಿಸಲಾಗಿತ್ತು. ಜಮೀನು ಒತ್ತುವರಿ ಸಂಬಂಧ ಸದರಿ ದಾವೆ ದಾಖಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ಪಾಲು ವಿಭಾಗದ ಪರಿಹಾರ ಕೇಳಿರಲಿಲ್ಲ ಎಂದರೆ ಸರಿ. ಸಾಕ್ಷಿ ಪುನಃ ಸದರಿ ದಾವೆಯಲ್ಲಿ ಈ ಹಿಂದೆಯೇ ಪಾಲು ವಿಭಾಗ ಆಗಿರುವ ವಿಷಯವನ್ನು ವಾದಿ ಒಪ್ಪಿಕೊಂಡಿದ್ದಾರೆ ಎನ್ನುತ್ತಾರೆ. ಅಸಲು ದಾವೆ ಸಂಖ್ಯೆ 164/80 ಅಥವಾ ಅಸಲು

ದಾವೆ ಸಂಖ್ಯೆ 152/82 ರ ದಾವೆಗಳಿಗೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ಸದರಿ ದಾವೆಗಳಲ್ಲಿ ವಾದಿ 1950 ರಲ್ಲಿ ಆಗಿರುವ ಪಾಲು ವಿಭಾಗವನ್ನು ಒಪ್ಪಿಕೊಂಡಿದ್ದಾರೆ ಎನ್ನುತ್ತಾರೆ. ಸದರಿ ದಾವೆಯಲ್ಲಿ ನನ್ನ ತಂದೆ ದಾನ ಪತ್ರ ಅಥವಾ ವಿಲ್ ಬಗ್ಗೆ ಏನು ಹೇಳಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆ ಸಲ್ಲಿಸಿದ್ದ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ.

15. ಅಸಲು ದಾವೆ ಸಂಖ್ಯೆ 50/92 ರ ದಾವೆಯನ್ನು ನಾನೇ ಪಾಲು ವಿಭಾಗಕ್ಕಾಗಿ ನನ್ನ ಸಹೋದರರ ವಿರುದ್ಧ ದಾಖಲಿಸಿದ್ದೆ. ಸದರಿ ದಾವೆಯಲ್ಲಿ ನನ್ನ ತಂದೆಯನ್ನು ದತ್ತು ತೆಗೆದುಕೊಂಡಿದ್ದ ಬಗ್ಗೆ ಅಥವಾ ನಂಜಪ್ಪ ಬರೆದ ವಿಲ್ ನ ಬಗ್ಗೆ ತಿಳಿಸಿಲ್ಲ. ಸದರಿ ದಾವೆಯಲ್ಲಿ ನಿಡಿ-2 ರ ದಾಖಲೆಯಲ್ಲಿ ಉಲ್ಲೇಖಿಸಲಾಗಿರುವ ಒಪ್ಪಿಗೆ ಪತ್ರ ಅಥವಾ 1950 ರಲ್ಲಿ ಆಗಿದೆ ಎನ್ನಲಾದ ಪಾಲು ವಿಭಾಗದ ಬಗ್ಗೆ ತಿಳಿಸಿರಲಿಲ್ಲ. ನಾನು ಸದರಿ ದಾವೆ ದಾಖಲಿಸುವಾಗ ನನ್ನ ತಂದೆ ಬದುಕಿದ್ದರು ಎಂದರೆ ಸರಿ. ನನ್ನ ತಂದೆ 2007 ರಲ್ಲಿ ತೀರಿಕೊಂಡರು. ಸದರಿ ದಾವೆಯಲ್ಲಿ ಉಲ್ಲೇಖಿಸಲಾಗಿದ್ದ 42 ಆಸ್ತಿಗಳು ನನ್ನ ತಂದೆಗೆ ಯಾವ ರೀತಿ ಬಂದಿತ್ತು ಎಂಬ ಬಗ್ಗೆ ತಿಳಿಸಿರಲಿಲ್ಲ. ನಿಡಿ-17 ರ ರಾಜಿ ಅರ್ಜಿಯಲ್ಲಿ ಪ್ರಸ್ತುತ ಈ ದಾವೆಯ ದಾವಾ ಸ್ವತ್ತುಗಳ ಬಗ್ಗೆ ಉಲ್ಲೇಖ ಇಲ್ಲ.

16. ನಿಡಿ-19 ಮತ್ತು 20 ರ ಆದೇಶಗಳಲ್ಲಿ ದಾವಾ ಸ್ವತ್ತುಗಳ ಸಂಬಂಧ ಉಲ್ಲೇಖ ಇದೆ. ನಿಡಿ-19 ರ ಆದೇಶದಲ್ಲಿ ಉಲ್ಲೇಖಿಸಿರುವ ನೀಲಮ್ಮ ಎನ್ನುವವರು ನನ್ನ ತಾಯಿ. ನಿಡಿ-19

ರ ಪುಟ ಸಂಖ್ಯೆ 3 ರಲ್ಲಿ ನವಿಲಪ್ಪ ಮತ್ತು ನೀಲಮ್ಮ ಎಂಬ ಅಕ್ಷರಗಳನ್ನು ಯಾರು ತಿದ್ದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ತಿದ್ದುಪಡಿ ಮಾಡಿದವರು ಮೇಲು ಸಹಿ ಹಾಕಿಲ್ಲ ಎಂದರೆ ಸರಿ. ಸದರಿ ತಿದ್ದುಪಡಿಗಳನ್ನು ನಾನೇ ಉದ್ದೇಶ ಪೂರಕವಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ನಿಡಿ-19 ರ ಮತ್ತೊಂದು ದೃಢಿಕೃತ ನಕಲನ್ನು ಪಡೆಯಲು ಅರ್ಜಿ ಹಾಕಿದ್ದೆ ಆದರೆ ಇನ್ನೂ ಸಿಕ್ಕಿಲ್ಲ ಎನ್ನುತ್ತಾರೆ. ನಿಡಿ-20 ರ ದಾಖಲೆಯಲೂ ಹೆಸರುಗಳನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ಸದರಿ ತಿದ್ದುಪಡಿ ಯಾರು ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅದನ್ನು ಸಹ ನಾನೇ ತಿದ್ದುಪಡಿ ಮಾಡಿದ್ದೇನೆ ಎಂದರೆ ಸರಿಯಲ್ಲ.

17. ಡಿ.ಡಿ.ಎಲ್.ಆರ್ ರವರು ಮಾಡಿದ್ದ ಆದೇಶವನ್ನು ಪ್ರಶ್ನೆ ಮಾಡಿ ನನ್ನ ತಂದೆ ಡಬ್ಲ್ಯೂಪಿ 20071/1993 ರ ಅರ್ಜಿಯನ್ನು ದಾಖಲಿಸಿದ್ದರು. ಅದಕ್ಕೂ ಮೊದಲು ನನ್ನ ತಂದೆ ಮತ್ತೊಂದು ರೀಟ್ ನ್ನು ಸಲ್ಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆರ್.ಎಸ್.ಎ 1391/2013 ರಲ್ಲಿ ಏನು ಆದೇಶ ಆಗಿದೆ ಎಂದು ಗೊತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ವಾದಿ ಈ ಹಿಂದೆ ಸಲ್ಲಿಸಿದ್ದ ಅಸಲು ದಾವೆ ಸಂಖ್ಯೆ 141/2007 ರ ದಾವೆ ವಜಾ ಆದ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯ ಎತ್ತಿ ಹಿಡಿದಿದೆ ಎನ್ನುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯ ವಾದಿಗೆ ಹೊಸದಾಗಿ ದಾವೆ ಹೂಡಲು ಅವಕಾಶ ಮಾಡಿಕೊಟ್ಟಿದ್ದರಿಂದ ವಾದಿ ಈ ದಾವೆ ಹೂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರ್. ಎಸ್. ಎ 1391/2013 ರಲ್ಲಿ ನಾನು ಸಹ ಪಕ್ಷಗಾರನಾಗಿದ್ದೆ ಎಂದರೆ ಸರಿ. ನಾನು ಸಹ ಉಚ್ಚ ನ್ಯಾಯಾಲಯದ ಮುಂದೆ ಹಾಜರಾಗಿರುವುದರಿಂದ ಅದರಲ್ಲಿ ಏನು ಆದೇಶವಾಗಿದೆ ಎಂದು ನನಗೆ ಗೊತ್ತು

ಎಂದರೆ ಸಾಕ್ಷಿ ವಾದಿ ಸಲ್ಲಿಸಿದ್ದ ದಾವೆ ವಜಾ ಆಗಿದೆ ಎಂದು ಮಾತ್ರ ನನಗೆ ಗೊತ್ತು ಎನ್ನುತ್ತಾರೆ. ಆರ್.ಎಸ್.ಎ 1391/2013 ಮತ್ತು ಡಬ್ಲ್ಯೂಪಿ ಸಂಖ್ಯೆ 631/2004 ರಲ್ಲಿ ಮಾಡಿರುವ ಆದೇಶವನ್ನು ಉಲ್ಲೇಖಿಸಿ ವಾದಿ ಈ ದಾವೆ ಸಲ್ಲಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

18. ಆರ್.ಎಸ್.ಎ 1391/2013 ರ ಮೇಲ್ಮನವಿ ಬಾಕಿ ಇರುವ ಬಗ್ಗೆ ನನಗೆ ಗೊತ್ತಿದ್ದರೂ ಸಹ ದಾವಾ ಸ್ವತ್ತುಗಳ ಸಂಬಂಧ ನನ್ನ ಹೆಂಡತಿ ಹೆಸರಿಗೆ ನಿಡಿ–38 ರಂತೆ ದಾನ ಪತ್ರ ಮಾಡಿದ್ದೇನೆ ಎಂದರೆ ಸಾಕ್ಷಿ ನನ್ನ ವೈಯಕ್ತಿಕ ಸಮಸ್ಯೆಗಳಿಂದ ಸದರಿ ದಾನ ಪತ್ರ ಮಾಡಿದ್ದೇನೆ ಎನ್ನುತ್ತಾರೆ. ಸದರಿ ದಾನ ಪತ್ರ ಬರೆಸುವಾಗ ಮಾನ್ಯ ಉಚ್ಚ ನ್ಯಾಯಾಲಯ ಮುಂದೆ ಮೇಲ್ಮನವಿ ಬಾಕಿ ಇತ್ತು ಎಂದರೆ ಸರಿ. ನಿಡಿ–38 ರ ದಾನ ಪತ್ರದಲ್ಲಿ ನ್ಯಾಯಾಲಯಗಳಲ್ಲಿ ಬಾಕಿ ಇರುವ ವ್ಯಾಜ್ಯಗಳ ಬಗ್ಗೆ ಉಲ್ಲೇಖಿಸಿಲ್ಲ ಎಂದರೆ ಸರಿ.

19. ವಾದಿ ಈ ದಾವೆಯಲ್ಲಿ ಏನೇನು ದಾಖಲೆ ಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಿಡಿ–2 ರ ದಾಖಲೆಯಲ್ಲಿ ಉಲ್ಲೇಖಿಸಲಾಗಿರುವ ಒಪ್ಪಿಗೆ ಪತ್ರದ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲ ಎಂದು ತಹಶೀಲ್ದಾರ್ ರವರು ನಿ.ಪಿ.–1 ರಂತೆ ಹಿಂಬರಹ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಸದರಿ ಹಿಂಬರಹವನ್ನು 2022 ರಲ್ಲಿ ಕೊಟ್ಟಿದ್ದಾರೆ ಆದರೆ ನಾನು ಹಾಜರುಪಡಿಸಿರುವ ನಿಡಿ–2 ರ ದಾಖಲೆ 1966 ಕ್ಕೆ ಸಂಬಂಧಿಸಿದ್ದು ಎನ್ನುತ್ತಾರೆ. ನಿಡಿ–2 ರ ದಾಖಲೆಯಲ್ಲಿ ಉಲ್ಲೇಖಿಸಿರುವ ಮ್ಯೂಟೇಷನ್ ಆದೇಶ ದಾಖಲೆ ಕಚೇರಿಯಲ್ಲಿ ಲಭ್ಯವಿಲ್ಲ ಎಂದು ತಹಶೀಲ್ದಾರ್ ರವರು ನಿ.ಪಿ.–9 ರಂತೆ ಹಿಂಬರಹ ಕೊಟ್ಟಿದ್ದಾರೆ ಎಂದರೆ ಸಾಕ್ಷಿ

ಕೊಟ್ಟಿರಬಹುದು ಎನ್ನುತ್ತಾರೆ.

20. ಸರ್ವೆ ನಂಬರ್ 182 ರ ಪಹಣಿ 2022-2023 ನೇ ಸಾಲಿನಲ್ಲಿ ವಾದಿ ಹೆಸರಿಗೆ ಇದೆ ಎಂದರೆ ಸಾಕ್ಷಿ ಅವರಿಗೆ ಸೇರಿದ 26 ಗುಂಟೆ ಜಮೀನಿನ ಪಹಣಿ ಅವರಿಗೆ ಹೆಸರಿಗೆ ಇದೆ ಮತ್ತು ನನ್ನ ತಂದೆ ಹೆಸರಿಗೆ ಇರುವ 1 ಎಕರೆ 36 ಗುಂಟೆ ಜಮೀನಿನ ಪಹಣಿ ನನ್ನ ತಂದೆಯ ಹೆಸರಿಗೆ ಇತ್ತು ಎನ್ನುತ್ತಾರೆ. 1 ಎಕರೆ 36 ಗುಂಟೆ ಜಮೀನಿನ ದಾಖಲೆ ನನ್ನ ಹೆಸರಿಗೆ ಇತ್ತು ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆ ರೀತಿ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಗೆ ಗೊತ್ತಾಗದಂತೆ ನನ್ನ ಮತ್ತು ನನ್ನ ಹೆಂಡತಿ ಹೆಸರಿಗೆ ಮೋಸದಿಂದ ದಾಖಲೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

21. ಈ ದಾವೆಯಲ್ಲಿ ವಾದಿ ಕೇಳಿರುವ ಪರಿಹಾರ ಸಿಗಬಹುದು ಎಂಬ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**